ಪರಿಹರಿಸತಕ್ಕಂಥದ್ದಕ್ಕೆ ಕಾರ್ಯಕ್ರಮಗಳನ್ನು ಒಂದು ಕಡೆ ನಿರೂಪಿಸುವುದು, ಅದೇ ರೀತಿ ರಕ್ಷಣೆ ಕೊಡತಕ್ಕಂಥದ್ದಕ್ಕೆ ಗಮನವನ್ನು ಹರಿಸುತ್ತೇವೆ.

ವಿಜಾಪುರ ನಗರದಲ್ಲಿ ಕೇಂದ್ರ ಬಸ್ ನಿಲ್ದಾಣದ ಕಾಮಗಾರಿಗಳನ್ನು ತ್ವರಿತಗೊಳಿಸುವುದು.

(5) 122. ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ವಿಜಾಪುರ) ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿಜಾಪುರ ನಗರದ ಕೇಂದ್ರ ಬಸ್ ನಿಲ್ದಾಣದ (KSRTC) ಕಾಮಗಾರಿಯ ಕಾರ್ಯವು ತೀವ್ರ ಮಂದಗತಿಯಿಂದಾಗಿ ವಿಳಂಬವಾಗಿ ಸಾರ್ವಜನಿಕರಿಗೆ ತೊಂದರೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬಸ್ ನಿಲ್ದಾಣದ ಕಾಮಗಾರಿಯು ಪ್ರಾರಂಭವಾಗಿದ್ದು ಯಾವಾಗ ಹಾಗೂ ಯಾವ ಕಾಲಮಿತಿಯೊಳಗಾಗಿ ಕಾಮಗಾರಿಯನ್ನು ಮುಕ್ತಾಯಗೊಳಿಸಬೇಕಾಗಿತ್ತು;

ಇ) ಈ ಕಾಮಗಾರಿಯು ವಿಳಂಭವಾಗುತ್ತಿರುವುದಕ್ಕೆ ಕಾರಣಗಳೇನು;

ಈ) ಈ ನಿಲ್ದಾಣದ ಕಾಮಗಾರಿಯ ಅಂದಾಜು ಮೊತ್ತ ಎಷ್ಟು;

ಉ) ಇದುವರೆಗೂ ಬಿಡುಗಡೆಯಾಗಿರುವ ಹಣ ಎಷ್ಟು ಹಾಗೂ ಬಾಕಿ ಬಿಡುಗಡೆಯಾಗಬೇಕಿರುವ ಹಣ ಎಷ್ಟು ಹಾಗೂ ಯಾವಾಗ ಬಿಡುಗಡೆ ಮಾಡಲಾಗುವುದು;

ಊ) ಯಾವ ಕಾಮಿತಿಯೊಳಗಾಗಿ ಈ ಕೇಂದ್ರ ಬಸ್ ನಿಲ್ದಾಣದ ಕಾಮಗಾರಿಯನ್ನು ಸಂಪೂರ್ಣಗೊಳಿಸಲಾಗುವುದು;

ಋ) ಈ ಕಾಮಗಾರಿಯ ಗುತ್ತಿಗೆದಾರರು ಯಾರು;

ಶ್ರೀ ಎನ್. ಚೆಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಹೌದು,

ಆ) ಪ್ರಾರಂಭವಾದ ದಿನಾಂಕ:30-10-2003 ಮತ್ತು ಮುಕ್ತಾಯ ಗೊಳಿಸಲು ನಿಗಧಿಪಡಿಸಿದ ದಿನಾಂಕ : 29-10-2005.

ಇ) ಸಂಸ್ಥೆಯ ಆರ್ಥಿಕ ಪರಿಸ್ಥಿತಿಯು ಕ್ಲಿಷ್ಟಕರವಾಗಿರುವುದರಿಂದ, ಕಾಮಗಾರಿಯು ವಿಳಂಭವಾಗುತ್ತಿದೆ.

ಈ) ರೂ. 6.50 ಕೋಟಿಗಳು

ಊ) ಬಿಡುಗಡೆಯಾಗಿರುವ ಮೊತ್ತ ರೂ. 3,13,10,642.00 ಹಾಗೂ ಬಿಡುಗಡೆಯಾಗಬೇಕಿರುವ ಮೊತ್ತ ರೂ. 3,36,89,358.00 ಕಾಮಗಾರಿಯ ಪ್ರಗತಿಯ ಕೆಲಸಕ್ಕನುಗುಣವಾಗಿ ಹಣ ಬಿಡುಗಡೆ ಮಾಡಲಾಗುವುದು.

ಋ) ಮೇ 2006ರ ಅಂತ್ಯದೊಳಗಾಗಿ.

ೠ) ಮೆ: ಮೈಸೂರು ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್ ಲಿಮಿಟೆಡ್, ಬೆಂಗಳೂರು.

ಶ್ರೀ ಅಪ್ಪ ಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣ್ಣಶೆಟ್ಟಿ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಈಗಾಗಲೇ ಬಿಜಾಪುರ ಬಸ್ ನಿಲ್ದಾಣದ ಒಂದು ಕಟ್ಟಡ ಕಾಮಗಾರಿ ವಿಳಂಬವಾಗಿದೆ ಎಂದು ನಾನು ಪ್ರಶ್ನೆಯನ್ನು ಕೇಳಿದಾಗ ಆ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಈಗಾಗಲೇ 5 ತಿಂಗಳು ಈ ಕಾಮಗಾರಿ ಮುಗಿಯದೇ ವಿಳಂಬವಾಗಿದೆ. ಈಗಲೂ ಆ ಕೆಲಸವನ್ನು 2006ರಲ್ಲಿ ಮುಕ್ತಾಯ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದಷ್ಟು ಬೇಗನೆ ಇದನ್ನು ಮಾಡಬೇಕು. ಏಕೆಂದರೆ ಜನರಿಗೆ ಬಸ್ ನಿಲ್ದಾಣದ ವ್ಯವಸ್ಥೆ ಇಲ್ಲದೇ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಮಾನ್ಯ ಸಚಿವರು ಇದಕ್ಕೆ ಸ್ಪಷ್ಟವಾಗಿ ಹಣವನ್ನು ಕೊಟ್ಟು ಒಂದು ಕಾಮಗಾರಿಯನ್ನು ಬೇಗ ಮುಗಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎನ್. ಚಿಲುವರಾಯಸ್ವಾಮಿ (ಮಾನ್ಯ ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಸದಸ್ಯರು ಆ ಸಂದರ್ಭದಲ್ಲಿ 50 ಪರ್ಸೆಂಟ್ ಈ ಕಾಮಗಾರಿಗೆ ಎಂ.ಎಲ್.ಎ. ಮತ್ತು ಎಂ.ಪಿ. ಫಂಡ್‌ನಿಂದ ಒದಗಿಸಲಾಗುವುದು ಎಂದು ಒಪ್ಪಿಕೊಂಡು ಆದಮೇಲೆ ತದನಂತರ ಆ ಕಾಮಗಾರಿಯನ್ನು ಸಂಸ್ಥೆ ಪ್ರಾರಂಭಮಾಡಿದೆ. ಈಗಾಗಲೇ 50 ಪರ್ಸೆಂಟ್ ಹಣವನ್ನು ಸಂಸ್ಥೆಯಿಂದ ಖರ್ಚು ಮಾಡಲಾಗಿದೆ. ಇನ್ನು ಉಳಿದಂಥ 50 ಪರ್ಸೆಂಟನ್ನು ಎಂ. ಪಿ. ಯಾದರೂ ಆಗಲಿ ಅಥವಾ ಶಾಸಕರ ನಿಧಿಯಿಂದಲಾದರೂ ಆಗಲಿ ಕೊಡುವುದಕ್ಕೆ ಇದುವರೆಗೆ ಅವರುಗಳು ಪ್ರಯತ್ನ ಮಾಡಿಲ್ಲ. ಆದುದರಿಂದ ಇಲ್ಲಿಯವರೆಗೂ ಆಗದೇ ಅದು ನಿಧಾನವಾಗಿದೆ. ಆದರೆ ನಾನು ಈಗಾಗಲೇ ಅಧಿಕಾರಿಗಳಿಗೆ ಅದನ್ನು ಬಹಳ ದಿವಸಗಳಿಂದ ತಡವಾಗಿರುವುದರಿಂದ ಕಾಮಗಾರಿ ಮುಂದುವರೆಸುವುದಕ್ಕೆ ಮತ್ತು ತಕ್ಷಣ ಮುಗಿಸುವುದಕ್ಕೆ ಸೂಚನೆ ಕೊಟ್ಟಿದ್ದೇನೆ. ಆದರೂ ಕೂಡ ಮತ್ತೆ ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಅದಷ್ಟು ಸ್ವಲ್ಪವಾದರೂ ಕೊಡ ಸಂಸ್ಥೆಗೆ ಎಂ. ಪಿ. ಮತ್ತು ಶಾಸಕರು ಹಣವನ್ನು ಕೊಟ್ಟರೆ ತುಂಬಾ ಒಳ್ಳೆಯದು. ಇದರಿಂದ ಬೇಗ ಬೇಗ

ಕೆಲಸ ಮಾಡುವುದಕ್ಕೆ ಮತ್ತು ಆ ಮೂಲಕ ಸಾರ್ವಜನಿಕ ಸವಲತ್ತನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆಂದು ತಮ್ಮ ಮೂಲಕ ಅವರಿಗೆ ವಿನಂತಿ ಮಾಡುತ್ತೇನೆ.

ಸೊರಬ ಪಟ್ಟಣದಲ್ಲಿ ಕೆ. ಎಸ್. ಆರ್. ಟಿ. ಸಿ ಬಸ್‌ಸ್ಟಾಂಡ್ ಕಾಮಗಾರಿಯನ್ನು ಪ್ರಾರಂಭಿಸುವುದು.

(6) l. ಶ್ರೀ ಕುಮಾರ್ ಬಂಗಾರಪ್ಪ ಎಸ್. (ಸೊರಬ) ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸೊರಬ ಪಟ್ಟಣದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟ್ಯಾಂಡ್ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಆ) ಈ ಬಸ್ ಸ್ಟ್ಯಾಂಡ್ ಕಾಮಗಾರಿಯನ್ನು ಕೆ.ಎಸ್.ಆರ್.ಟಿ.ಸಿ.ಯ ಯಾವ ವಿಭಾಗ ನಿರ್ವಹಿಸುವುದು?

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಶಿವಮೊಗ್ಗ ಜಿಲ್ಲೆಯ ಸೊರಬ ಪಟ್ಟಣವು ರಾಷ್ಟ್ರೀಕೃತವಲ್ಲದ ವಲಯದಲ್ಲಿದ್ದು, ಇಲ್ಲಿನ ಬಹುಕೇತ ಸಾರಿಗೆ ಅವಶ್ಯಕತೆಗಳನ್ನು ಖಾಸಗಿಯವರು ಪೂರೈಸುತ್ತಿದ್ದಾರೆ. ಪ್ರಸ್ತುತ ಸೊರಬ ಪಟ್ಟಣದ ಮೂಲಕ ಕ.ರಾ.ರ.ಸಾ. ಸಂಸ್ಥೆಯ 34 ಆಗಮನ ಮತ್ತು 34 ನಿರ್ಗಮನಗಳು ಕಾರ್ಯಾಚರಣೆಯಲ್ಲಿದ್ದು, ಸಧ್ಯಕ್ಕೆ ಸೊರಒ ಪಟ್ಟಣದಲ್ಲಿ ಕ.ರಾ.ರ.ಸಾ.ಸಂಸ್ಥೆಯ ಬಸ್ಸು ನಿಲ್ದಾಣದ ಅವಶ್ಯಕತೆ ಇರುವುದಿಲ್ಲ

ಆ) ಉದ್ಭವಿಸುವುದಿಲ್ಲ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರತಕ್ಕಂಥ ಪ್ರಶ್ನೆ ಬಹಳ ಮೂಲಭೂತವಾಗಿರತಕ್ಕಂಥ ಪ್ರಶ್ನೆ, ಅಂದರೆ ಸೊರಬ ತಾಲ್ಲೂಕಿಗೆ ಒಂದು ಬಸ್ ಸ್ಟ್ಯಾಂಡ್ ಬೇಕಾಗಿರತಕ್ಕಂಥದ್ದರ ಬಗ್ಗೆ ಕೇಳಿದ್ದೇನೆ. ಇದಕ್ಕೆ ಸಚಿವರಾದ ತಾವು ಕೊಟ್ಟಿರತಕ್ಕಂಥದ್ದರಲ್ಲಿ ಬಸ್‌ಸ್ಟ್ಯಾಂಡ್ ಅವಶ್ಯಕತೆಯೇ ಇಲ್ಲಿ ಇಲ್ಲ ಎನ್ನತಕ್ಕಂಥ ವಾದವನ್ನು ನೀವು ಹೇಳಿದ್ದೀರಿ. ಮೂಲಭೂತವಾಗಿ ನಿಮ್ಮ ಬಜೆಟ್‌ನಲ್ಲಿಯೇ ಹೇಳಿರತಕ್ಕಂಥದ್ದರಲ್ಲಿ ಪ್ರಮುಖ ಉದ್ದೇಶವಾದ ಸಾರಿಗೆ ಸೇವೆಗಳನ್ನು ಒದಗಿಸುವುದೇ ಪ್ರಮುಖ ಉದ್ದೇಶವೆಂದು ಹೇಳಿ, ಇದು ಸುಮಾರು ಎಳೆಂಟು ವರ್ಷಗಳ ಕಾಲದಿಂದ ಹೈ ಕೋರ್ಟ್‌ಗೆಲ್ಲಾ ಹೋಗಿ ಎಂಟು ವರ್ಷಗಳ ಕಾಲ ಸತತವಾಗಿ ಹೋರಾಟ ಮಾಡಿದ ನಂತರ ಈಗ ಸರ್ಕಾರಿ ಜಾಗವನ್ನು ಕೆ.ಎಸ್.ಆರ್.ಟಿ.ಸಿ.ಗೆ ಕೊಡಬೇಕೆಂದು ತೀರ್ಮಾನ ಮಾಡಿ ಈಗ ಹ್ಯಾಂಡ್‌ಓವರ್ ಮಾಡಿದ್ದೇವೆ. ಈಗ ಅಲ್ಲಿ ಕೇವಲ 34 ಬಸ್ಸುಗಳು ಓಡಾಡುತ್ತಿದ್ದು, ಅಲ್ಲಿ ಬಸ್‌ಸ್ಟ್ಯಾಂಡ್‌ನ ಅವಶ್ಯಕತೆಯಿಲ್ಲವೆಂದು ಹೇಳುತ್ತಿದ್ದೀರಿ